
# ಕುಟುಂಬ ಜೀವನದಲ್ಲಿ ಆಧ್ಯಾತ್ಮಿಕ ಸಾಧನೆ

**ಅರುಣ್ ಸಿ.ಕೆ.**



ಸಂಸಾರ ಜೀವನದಲ್ಲಿದ್ದುಕೊಂಡು ಆಧ್ಯಾತ್ಮಿಕ ಸಾಧನೆ ಮಾಡಬಹುದೆ? ಅದು ಸಾಧ್ಯವೆ? ಇದು ಹಲವರ ಮುಂದಿನ ಪ್ರಶ್ನೆ. ಅದಕ್ಕೆ ಉತ್ತರವೆಂಬಂತೆ ಶ್ರೀರಾಮಕೃಷ್ಣರ, ಶ್ರೀಮಾತೆಯವರ ಜೀವನ ನಮ್ಮ ಮುಂದಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಶ್ನೆಗೆ ಉತ್ತರ ನೀಡುವ ಪ್ರಯತ್ನ ಇಲ್ಲಿದೆ. ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅವರು ತಮ್ಮ ವೃತ್ತಿಜೀವನದೊಂದಿಗೆ ಚಿಂತನಪರವಾದ ಲೇಖನಗಳನ್ನು ಪತ್ರಿಕೆಗಳಲ್ಲಿ ಬರೆಯುತ್ತ ಬಂದಿದ್ದಾರೆ.

ಸತ್ ಚಿತ್‌ಆನಂದ ಸ್ವರೂಪನಾದ ಭಗವಂತನ ಸಾಕ್ಷಾತ್ಕಾರವೇ ಅಧ್ಯಾತ್ಮವಾಗಿದ್ದು, ಬಹುಪಾಲು ಗೃಹಸ್ಥರು ಅಧ್ಯಾತ್ಮವು ಸಂನ್ಯಾಸಿಗಳಿಗೆ ಮಾತ್ರ ಮೀಸಲು ಎಂದು ಭಾವಿಸಿದ್ದರೆ, ಮತ್ತಷ್ಟು ಸಂಸಾರಿಗಳು ದೇಹ, ಮನಸ್ಸು, ಬುದ್ಧಿಗಳ ಜೊತೆಗೆ ಆತ್ಮಭಾವವನ್ನು ಹೊಂದಿ ಭಗವಂತನನ್ನು ತಮ್ಮ ಪ್ರಾಪಂಚಿಕ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುವುದಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ. ಬಹುಪಾಲು ಪ್ರಾಪಂಚಿಕರು ಬಾಹ್ಯ ಜಗತ್ತಿನ ಆಕರ್ಷಣೆಗೆ ಒಳಗಾಗಿ ತಾವು ನಡೆಸುತ್ತಿರುವ ಭೋಗಪ್ರಧಾನ ಜೀವನವೇ ಪರಮಸತ್ಯವೆಂದು ಅರ್ಥೈಸಿಕೊಂಡಿದ್ದಾರೆ. ಇಂದ್ರಿಯಗಳು ಮತ್ತು ಇದಕ್ಕೆ ಪ್ರೇರಕವಾದ ಮನಸ್ಸು, ಬುದ್ಧಿ, ಚಿತ್ತ ಅಹಂಕಾರಗಳು ಬಾಹ್ಯಪ್ರಪಂಚದ ವಿಷಯ ವಸ್ತುಗಳೊಡನೆ ತಾದಾತ್ಮ್ಯ ಭಾವವನ್ನು ಹೊಂದಿದ್ದು, ಸಾತ್ವಿಕ, ರಾಜಸಿಕ ಹಾಗೂ ತಮೋಗುಣಗಳ ಮಾಯಾತೆರೆಯ ಪ್ರಭಾವದಿಂದ ಸಕಲ ಜೀವ ರಾಶಿಗಳಲ್ಲಿ ಶ್ರೇಷ್ಠ ಜನ್ಮವನ್ನು ಪಡೆದಿದ್ದೂ ಮನುಷ್ಯನು ಭಗವತ್ ಸಾಕ್ಷಾತ್ಕಾರದ ಸದುದ್ದೇಶದಿಂದ ವಿಮುಖನಾಗುತ್ತಿರುವುದು ದುರ್ದೈವದ ಸಂಗತಿಯಾಗಿದೆ.

ಸರಳತೆ, ತೃಪ್ತಿ ಮತ್ತು ತತ್ತ್ವಪ್ರಧಾನ ಜೀವನ ಗೃಹಸ್ಥರ ಆದರ್ಶವಾಗಬೇಕು. ಪೋಷಕರು ಬದುಕನ್ನು ನೋಡುತ್ತಿರುವ ದೃಷ್ಟಿಕೋನ ಬದಲಾಗಬೇಕು. ಸ್ವಾರ್ಥಪರ ಹಾಗೂ ಸ್ವ-ಕೇಂದ್ರಿತ ಜೀವನಶೈಲಿಯಿಂದ ವ್ಯಕ್ತಿಗಳ ಮಧ್ಯೆ ಅಪನಂಬಿಕೆ; ಮತ್ತೊಬ್ಬರ ಭಾವನೆಗಳನ್ನು ಗೌರವಿಸುವ ಸಂಸ್ಕೃತಿ, ನೊಂದ ಜೀವಿಗಳಿಗೆ ಸ್ಪಂದಿಸುವ ಮನೋಧರ್ಮ ಕ್ಷೀಣಿಸುತ್ತಿದೆ. ಕುಟುಂಬ ಹಾಗೂ ಸಮಾಜದಲ್ಲಿ ಅಶಾಂತಿ, ಅಸಮಾಧಾನ ಹಾಗೂ ಅರಾಜಕತೆಯ ವಾತಾವರಣ ಸೃಷ್ಟಿಯಾಗುತ್ತಿದೆ.

ನಮ್ಮನ್ನು ಹೆತ್ತ ತಂದೆ ತಾಯಿಗಳು ಭಗವಂತನ ಪ್ರತಿನಿಧಿಗಳು ಎಂದು ಭಾವಿಸಿ ವೃದ್ಧಾಪ್ಯದಲ್ಲಿ ಸೇವೆಯನ್ನು ಮಾಡದೆ ವೃದ್ಧಾಶ್ರಮಕ್ಕೆ ಕಳುಹಿಸುತ್ತಿರುವ ಸಂಸ್ಕೃತಿ ನಮ್ಮ ಆಂತರಿಕ ದಿವಾಳಿತನಕ್ಕೆ ಸಾಕ್ಷಿಯಾಗಿದೆ. ಮಕ್ಕಳು ನಾವು ಹೇಳುವ ಮಾತುಗಳನ್ನು ಕೇಳುವುದಕ್ಕಿಂತ ನಮ್ಮ ನಡೆ, ನುಡಿ, ಆಚಾರ-ವಿಚಾರಗಳನ್ನು ನೋಡಿ ಹೆಚ್ಚು ಪ್ರಭಾವಿತರಾಗುವುದರಿಂದ ಪೋಷಕರು ಉತ್ತಮ ಅಭಿರುಚಿ, ಸಂಸ್ಕೃತಿ ಮತ್ತು ಸಂಸ್ಕಾರಗಳೊಡನೆ ಅತ್ಯಂತ ಹೆಚ್ಚಿನ ಜವಾಬ್ದಾರಿಯಿಂದ ಗೃಹಸ್ಥ ಜೀವನವನ್ನು ನಿರ್ವಹಿಸಬೇಕಾಗಿದೆ. ಅನಿಯಂತ್ರಿತ ಆಧುನಿಕ ಜೀವನ ಶೈಲಿಯ ಜೊತೆಗೆ ಪಾರಂಪರಿಕ ಹಾಗೂ ಸಾಂಪ್ರದಾಯಿಕವಾಗಿ ಬಂದಿರುವ ಮೌಲ್ಯಗಳನ್ನು ಸಂಯೋಜನೆಗೊಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಕುಟುಂಬ ಹಾಗೂ ಸಮಾಜದ ಒಂದೇ ನಾಣ್ಯದ ಎರಡು ಮುಖಗಳಾಗಿದ್ದು, ಕುಟುಂಬ ಜೀವನಕ್ಕೆ ನೀಡುವ ಮಹತ್ವವನ್ನು ಸಾಮಾಜಿಕ ಜೀವನಕ್ಕೂ ನೀಡಬೇಕಾಗಿದೆ. ಸಂಸ್ಕಾರ ಹಾಗೂ ಚಾರಿತ್ರ್ಯಹೀನ ವ್ಯಕ್ತಿಗಳು ಯಾವುದೇ ಕ್ಷೇತ್ರದಲ್ಲಿ ಅಧಿಕಾರವನ್ನು ಪಡೆದಾಗ ಸಮಾಜವು ಅದನ್ನು ವೈಭವೀಕರಿಸುತ್ತಿರುವುದು ನಮ್ಮ ನೈತಿಕ ಅಧಃಪತನಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಈಗಿನ ಬಹುಪಾಲು ಪೋಷಕರ ಅಪೇಕ್ಷೆ ಮತ್ತು ಪ್ರಾತಿನಿಧ್ಯಗಳು ಶಿಕ್ಷಣದಿಂದ ಮಕ್ಕಳನ್ನು ಶ್ರೀಮಂತಗೊಳಿಸಿ ವಿದೇಶಕ್ಕೆ ಕಳುಹಿಸುವುದು ಮತ್ತು ಸಂಪತ್ತಿನ ಕ್ರೋಡೀಕರಣದಲ್ಲೇ ಕೇಂದ್ರೀಕೃತವಾಗಿದ್ದು, ಮುಂದಿನ ತಲೆಮಾರಿನ ಮಕ್ಕಳಿಗೆ ನಾವು ನೀಡಬಹುದಾದ ಕೊಡುಗೆಗಳಲ್ಲಿ ಸ್ಪಷ್ಟತೆ ಇಲ್ಲದಿರುವುದು ವಿಷಾದದ ಸಂಗತಿಯಾಗಿದೆ.

ಮನುಷ್ಯನ ಭೋಗಲಾಲಸೆಯಿಂದ ಕಲುಷಿತವಾಗುತ್ತಿರುವ ನೀರು, ಗಾಳಿ ಮತ್ತು ರಾಸಾಯನಿಕಗಳಿಂದ ವಿಷಪೂರಿತವಾಗುತ್ತಿರುವ ಧವಸಧಾನ್ಯಗಳನ್ನು ನೀಡುವ ಭೂಮಿಯನ್ನು ಕಾಪಾಡಿದರೆ ಅದೇ ಮುಂದಿನ ಪೀಳಿಗೆಗೆ ನಾವು ಕೊಡಬಹುದಾದ ಬಹುದೊಡ್ಡ ಆಸ್ತಿ. ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು, ಉತ್ತಮ ಅಭಿರುಚಿಯ ಪುಸ್ತಕಗಳನ್ನು ಅಧ್ಯಯನ ಮಾಡುವುದು, ಸತ್ಸಂಗ, ಸಾಧು-ಸಂತರ ಸಾನ್ನಿಧ್ಯ ಮತ್ತು ಹಿತೋಪ

ದೇಶಗಳನ್ನು ಆಲಿಸುವುದರಿಂದ ಆಂತರಿಕ ಮನಸ್ಸು ವಿಕಾಸವಾಗಿ ಆಧ್ಯಾತ್ಮಿಕ ಸಾಧನೆಗೆ ಭೂಮಿಕೆಯಾಗುತ್ತದೆ. ಶುದ್ಧ ಚಾರಿತ್ರ್ಯ ನಿರ್ಮಾಣ ಒಬ್ಬ ಆಧ್ಯಾತ್ಮಿಕ ಪಿಪಾಸುವಿಗೆ ಪ್ರಥಮ ಆದ್ಯತೆ ಆಗಬೇಕು. ಬಾಹ್ಯ ಭಕ್ತಿ, ಪೂಜೆ-ಪುನಸ್ಕಾರಗಳು, ತೀರ್ಥ ಯಾತ್ರೆ, ದಾನಧರ್ಮಾದಿಗಳನ್ನು ಮಾಡಿದರೂ ಆಂತರಿಕ ಪರಿಶುದ್ಧತೆ ಇಲ್ಲದಿದ್ದಲ್ಲಿ ಭಗವಂತನ ದಿವ್ಯ ಅನುಭೂತಿಯನ್ನು ಪಡೆಯುವುದು ಸಾಧ್ಯವಿಲ್ಲದ ಮಾತು.

ಗೃಹಸ್ಥರಾಗಿಯೂ ಸಂನ್ಯಾಸಿಗಳಿಗೆ ಸರಿಸಮಾನವಾಗಿ ಜೀವನವನ್ನು ನಡೆಸಲು ಸಾಧ್ಯ ಎಂದು ಜಗತ್ತಿಗೆ ತೋರಿಸಿಕೊಟ್ಟವರು ಅವತಾರ ಪುರುಷರಾದ ಶ್ರೀರಾಮಕೃಷ್ಣ ಪರಮಹಂಸರು. ಸನಾತನ ಹಿಂದೂಧರ್ಮದ ವೇದ, ಉಪನಿಷತ್ತು, ಹಾಗೂ ಇತರ ಶಾಸ್ತ್ರಗಳನ್ನು ಅಧ್ಯಯನ ಮಾಡಿರುವವರಿಗಷ್ಟೇ ಭಗವಂತನನ್ನು ಕಾಣಲು ಸಾಧ್ಯ ಎಂಬ ನಂಬಿಕೆಯು ಪ್ರಚಲಿತವಿದ್ದ ಕಾಲಘಟ್ಟದಲ್ಲಿ ಸಂಸಾರಿಯಾಗಿದ್ದರೂ ಸಹ ಸರಳತೆ, ನಿಷ್ಕಪಟತೆ, ಆಂತರಿಕ ಪರಿಶುದ್ಧತೆ, ವಿಷಯವಸ್ತುಗಳ ಮೇಲಿನ ವೈರಾಗ್ಯ ಹಾಗೂ ಭಗವತ್ ವ್ಯಾಕುಲತೆಯಿಂದ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬಹುದೆಂದು ಜಗತ್ತಿಗೆ ತೋರಿಸಿದ ಮಹಾನ್ ಸಂತರು ಅವರು. ಗೃಹಸ್ಥ ಸಾಧಕರಿಗೆ ಕಾಮಿನಿ-ಕಾಂಚನ ತ್ಯಾಗ ಬಹಳ ಮುಖ್ಯವಾದದ್ದು ಎಂದು ಅವರು ಒತ್ತಿ ಹೇಳುತ್ತಿದ್ದರು.

ಕೌಟುಂಬಿಕ ಜೀವನದಲ್ಲಿ ಇಂದು ಪರಸ್ಪರ ಹೊಂದಿಕೊಂಡು ಹೋಗುವ ಅವಿಭಕ್ತ ಕುಟುಂಬಗಳು ಇಲ್ಲವಾಗುತ್ತಿದ್ದು, ಸೋದರ ಸಂಬಂಧಗಳನ್ನು ಮಕ್ಕಳಿಗೆ ಪರಿಚಯಿಸಬೇಕಾದ ಸಂಸ್ಕೃತಿ ನಿರ್ಮಾಣವಾಗುತ್ತಿದೆ. ಗೃಹಸ್ಥ ಜೀವನದಲ್ಲಿ ಸಂಪತ್ತಿನ ಸಂಚಯ ಮಾಡಬಾರದೆಂದು ಯಾವ ಧರ್ಮಗ್ರಂಥಗಳೂ, ಸಂತರೂ ಹೇಳುವುದಿಲ್ಲ. ಆದರೆ ಮನುಷ್ಯ ಜನ್ಮದ ಉದ್ದೇಶ ಭಗವತ್ ಸಾಕ್ಷಾತ್ಕಾರವಾಗಿದ್ದು, ಸಾಂಸಾರಿಕ, ವ್ಯಾವಹಾರಿಕ ಹಾಗೂ ಸಾಮಾಜಿಕ ಜೀವನವನ್ನು ಅನಾಸಕ್ತಿಯಿಂದ ಅನುಭವಿಸುವ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಕರ್ಮಸಿದ್ಧಾಂತದ ಹಿನ್ನೆಲೆಯಲ್ಲಿ ಸತ್ಯಸಂಧರಾಗಿ, ನಿಸ್ವಾರ್ಥದಿಂದ ಯಾವುದೇ ಫಲಾಪೇಕ್ಷೆಯಿಲ್ಲದೆ ಕರ್ತವ್ಯಗಳನ್ನು ನಿರ್ವಹಿಸಬೇಕು.

ಶ್ರೀರಾಮಕೃಷ್ಣಪರಮಹಂಸರು ಗೃಹಸ್ಥ ಜೀವನದಲ್ಲಿದ್ದು ಆಧ್ಯಾತ್ಮಿಕ ಸಾಧನೆಯನ್ನು ಮಾಡಿದವರು ಹಾಗೂ ಅವರ ಪತ್ನಿ ಶ್ರೀಮಾತೆ ಶಾರದಾದೇವಿಯವರು ತುಂಬು ಕುಟುಂಬದಲ್ಲಿ ಜನಿಸಿ, ಎಲ್ಲರನ್ನೂ ಸಮಭಾವದಿಂದ ನೋಡುವ ವಿಶೇಷವಾದ ಗುಣವನ್ನು ಹೊಂದಿದ್ದರು. ಯಾರು ಯಾವ ಮನಸ್ಥಿತಿಯಲ್ಲಿದ್ದರೂ ಅವರನ್ನು ಇದ್ದ ಹಾಗೆ ಪ್ರೀತಿಸುವ ಮಾತೃಹೃದಯದ ಪ್ರೀತಿಯನ್ನು ಸಂಸಾರಿಗಳಿಗೆ ಅವರು ನೀಡುತ್ತಿದ್ದರು. ಪ್ರತಿಯೊಬ್ಬ ಜೀವಿಯೂ ತನ್ನ ಮಕ್ಕಳೆಂದೇ ಭಾವಿಸಿ, ಅವರ ನೋವು ನಲಿವುಗಳಲ್ಲಿ ಒಂದಾಗುತ್ತಿದ್ದರು. ಈಗಿನ ಗೃಹಸ್ಥರಿಗೆ ಮಾತೆ ಶಾರದಾದೇವಿಯವರ ಜೀವನ ಆದರ್ಶಪ್ರಾಯ.

ಆಧ್ಯಾತ್ಮಿಕ, ನೈತಿಕ ಹಾಗೂ ಮಾನವೀಯ ಮೌಲ್ಯಗಳ ನೆಲೆಗಟ್ಟಿನ ಮೇಲೆ ನಮ್ಮ ಚಾರಿತ್ರ್ಯ ಮತ್ತು ವ್ಯಕ್ತಿತ್ವವು ನಿರ್ಮಾಣವಾಗಬೇಕು. ಸರಳತೆ, ಆಂತರಿಕ ತೃಪ್ತಿ, ಸಹಾನುಭೂತಿ ನಮ್ಮ ವ್ಯಕ್ತಿತ್ವದಲ್ಲಿ ಅನುರಣಿತವಾಗಬೇಕು. ನಾವು ಮಾಡುವ ಪ್ರತಿಯೊಂದು ಕೆಲಸವನ್ನೂ ತ್ರಿಕರಣ ಶುದ್ಧಿಯಿಂದ ನಿರ್ವಹಿಸಿದಾಗ ನಮ್ಮ ಅಂತಃಕರಣಗಳಾದ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳು ಪರಿಶುದ್ಧಗೊಳ್ಳುವುದರ ಮೂಲಕ ನಮ್ಮ ಭಾವನೆಗಳು ಸದ್ಭಾವನೆಗಳಾಗುತ್ತವೆ.

ವೀರಸಂನ್ಯಾಸಿ ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕ ಜೀವನದ ಮಹತ್ವದ ಬಗ್ಗೆ ಸಂದೇಶವನ್ನು ನೀಡುತ್ತಾ ಹೇಳಿರುವ ಮಾತುಗಳು ಸರ್ವಕಾಲಿಕ ಹಾಗು ಸಾರ್ವತ್ರಿಕ. ''ಅಂತರ್ಜ್ಯೋತಿಯ ದರ್ಶನವಾದಾಗ ಪುಸ್ತಕಗಳನ್ನು ತ್ಯಜಿಸಿ ಕೇವಲ ಅಂತರ್ಮುಖಿಗಳಾಗಿ. ಎಲ್ಲವೂ ಪುಸ್ತಕಗಳಲ್ಲಿ ಇರುವುದಕ್ಕಿಂತ ಸಾವಿರ ಪಾಲು ಹೆಚ್ಚು ನಿಮ್ಮೊಳಗಿದೆ. ಆತ್ಮಶ್ರದ್ಧೆಯನ್ನು ಕಾಯ್ದುಕೊಂಡರೆ ಈ ಪ್ರಪಂಚದಲ್ಲಿ ನೀವು ಏನನ್ನಾದರೂ ಸಾಧಿಸಬಹುದು. ಎಂದಿಗೂ ದುರ್ಬಲರಾಗಬೇಡಿ, ಎಲ್ಲ ಶಕ್ತಿಯೂ ನಿಮ್ಮ ಆಂತರ್ಯದಲ್ಲಿದೆ.'' ಹೀಗೆ ಹೇಳಿದ ವಿವೇಕಾನಂದರ ಮಾತುಗಳು ಆತ್ಮಸಾಕ್ಷಾತ್ಕಾರದ ಮಹತ್ವವನ್ನು ಗೃಹಸ್ಥರಿಗೆ ತಿಳಿಸುತ್ತದೆ. ''ನಮ್ಮ ದೇಶದ ಪುನರುತ್ಥಾನ ನೀವು ಆಧ್ಯಾತ್ಮಿಕತೆಯನ್ನು ಅಳವಡಿಸಿಕೊಳ್ಳುವವರೆಗೆ ಆಗಲಾರದು. ಇಡೀ ಜಗತ್ತಿನ ಅಭ್ಯುದಯವು ನೀವು ಆಧ್ಯಾತ್ಮಿಕತೆಯನ್ನು ಅಳವಡಿಸಿಕೊಳ್ಳುವುದನ್ನು ಅವಲಂಬಿಸಿದೆ. ಆಧ್ಯಾತ್ಮಿಕ ಆಹಾರಕ್ಕಾಗಿ ಇಡೀ ಜಗತ್ತು ಭರತ ಖಂಡದೆಡೆಗೆ ನೋಡುತ್ತಿದೆ. ಮಾನವಕೋಟಿಗೆ ಅತ್ಯಾವಶ್ಯಕವಾದ ಆದರ್ಶ ಇಲ್ಲಿದೆ. ಅಧ್ಯಾತ್ಮವನ್ನು ಬೋಧಿಸಿದ ಮೇಲೆ ನಿಮಗೆ ಬೇಕಾದ ಲೌಕಿಕ ಜ್ಞಾನವೆಲ್ಲವೂ ತಾನಾಗಿಯೇ ಬರುವುದು'' ಎಂಬುದು ವಿವೇಕಾನಂದರ ಅಭಿಪ್ರಾಯವಾಗಿತ್ತು.

ಗೃಹಸ್ಥರು ಆಧ್ಯಾತ್ಮಿಕ ಸಾಧನೆಯನ್ನು ಮಾಡಬೇಕೆಂದು ಸಂಸಾರ ಜೀವನದಿಂದ ವಿಮುಖರಾಗಬೇಕಾಗಿಲ್ಲ. ಸಾಂಸಾರಿಕ ಬದುಕು ಅಧ್ಯಾತ್ಮ ಜೀವನದಿಂದ ಹೊರತಲ್ಲ. ಸಂಸಾರದ ಜಂಜಾಟ ಜವಾಬ್ದಾರಿಗಳನ್ನೆಲ್ಲ ಮುಗಿಸಿ ನಂತರ ಆಧ್ಯಾತ್ಮಿಕ ಸಾಧನೆಯನ್ನು ಮಾಡುತ್ತೇನೆಂದರೆ ಅದು ಆಗದ ಮಾತು. ನಾವು ದಿನನಿತ್ಯದ ಜೀವನದಲ್ಲಿ ಮಾಡುವ ಪ್ರತಿಯೊಂದು ಕಾರ್ಯವನ್ನೂ ಆಧ್ಯಾತ್ಮಿಕಗೊಳಿಸುವುದರ ಮೂಲಕ ಹಾಗೂ ಭಗವಂತನಲ್ಲಿ ಶರಣಾಗತಿಯ ಭಾವವನ್ನು ಹೊಂದುವ ಮೂಲಕ ನಮ್ಮ ಜೀವನವನ್ನು ಉನ್ನತಿಗೇರಿಸಬೇಕು. ಈ ರೀತಿಯಾಗಿ ಗೃಹಸ್ಥಜೀವನವನ್ನು ಮಾಡಿದಾಗ ಸಾಧಕನ ಹೃದಯವು ದೇವನ ಮಂದಿರವಾಗುತ್ತದೆ. ಆತನು ಮಾಡುವ ಪ್ರತಿಯೊಂದು ಸತ್ಕರ್ಮವೂ ಪೂಜೆಯಾಗುತ್ತದೆ. ಸತ್‌ಚಿಂತನೆಗಳು ಭಗವಂತನಿಗೆ ಅಭಿಷೇಕವಾಗುತ್ತದೆ. ಮಾತು ಮಂತ್ರವಾಗುತ್ತದೆ. ದಿವ್ಯತ್ರಯರ ಬದುಕು ಗೃಹಸ್ಥರಾದ ನಮಗೆ ಪ್ರೇರಣೆ ಹಾಗೂ ಆದರ್ಶಪ್ರಾಯವಾಗಿದೆ.